ಹೊಸ ಸಂಚಲನ. ಕಳೆದು ಹೋದ ಹರೆಯದ ಪುನರಾಗಮನ. ಹೀಗೂ ಸಾಧ್ಯವೇ? ಸಾಧ್ಯ ಎನ್ನುತ್ತಿದೆ ವಾಸ್ತವ. ಮೀಸಲಳಿಯದ ಚೆಲುವು ತುಸು ಕಂದಿದ್ದರೂ ಆಕರ್ಷಣೆ ಕಳೆದುಕೊಂಡಿರದೆ ತಾಜಾ ಆಗಿ ಉಳಿದುಕೊಂಡಿದೆಯೆಂಬುದನ್ನು ಪುರುಷನೋರ್ವನ ಒಡನಾಟ ಮನದಟ್ಟು ಮಾಡಿಕೊಟ್ಟಿದೆ. ಆಗಂತುಕನಾಗಿ ಬಂದವನು ಮನೆಯವನಂತಾಗಿ ತನ್ನ ಒಲುಮೆಯಲ್ಲಿ ಅವಳನ್ನು ತೋಯಿಸುತ್ತಿದ್ದಾನೆ. ಮೀಯಿಸುತ್ತಿದ್ದಾನೆ. ಮೈ ಮರೆಸುತ್ತಿದ್ದಾನೆ. ವಯಸ್ಸು ಅರವತ್ತಾದರೇನಂತೆ? ಯೌವನದ ಹಪಹಪಿಕೆಯ ಯಯಾತಿಯಂತೆ ತನ್ನ ದೇಹಾಕಾರವನ್ನು ಕಾಪಿಟ್ಟುಕೊಂಡಿದ್ದಾನೆ ಫಲ್ಗುಣ. ಜೀವನೋತ್ಸಾಹವನ್ನು ಬೆಚ್ಚಗಿರಿಸಿಕೊಂಡಿದ್ದಾನೆ. ಬೇರೆಯವರ ಕಣ್ಣಿಗೆ ಹೇಗೇ ಕಾಣಲಿ, ತನ್ನ ಕಣ್ಣಿಗಂತೂ ಸೊಬಗನಂತೆ ಕಾಣುತ್ತಿದ್ದಾನೆ. ಚಂಡಿ ಹಿಡಿದ ಮಗು ತಾಯಿ ತನ್ನನ್ನು ಎತ್ತಿಕೊಳ್ಳಬೇಕೆಂದು ಅವಳ ಕಾಲು ಕಟ್ಟಿಕೊಳ್ಳುವ ಹಾಗೆ ತನ್ನ ಅತೃಪ್ತ ಕಾಮನೆ ಫಲ್ಗುಣನನ್ನು ಆತುಕೊಳ್ಳುವಂತೆ ಪ್ರೇರೇಪಿಸುತ್ತಿದೆಯೇ? ಇರಬಹುದು. ತನ್ನಲ್ಲೇ ಗುಣುಗುಣಿಸಿಕೊಂಡಳು ವೈಷ್ಣವಿ, 'ಆಗಂತುಕನಾಗಿ ಮನೆಗೆ ಬಂದೆ. ಅತಿಕ್ರಮಣವೆಂದು ಗೊತ್ತಾಗದಂತೆ ಮನಕ್ಕೆ ಪ್ರವೇಶ ಪಡೆದೆ. ಅರಕೆಯೊಂದನ್ನು ತುಂಬಿಕೊಡುವ ಕನಸನ್ನು ಮೀಟಿದೆ. ಆಶ್ವಾಸನೆಯನ್ನು ಸತ್ಯವಾಗಿಸುತ್ತೀಯಾ ಗೆಳೆಯಾ? ನಂಬಬಹುದೇ ನಿನ್ನ? ನಿನ್ನ ನಂಬಬಹುದೇ?'

**ಪಾರಿಜಾತದ ಮರದಡಿಯಲ್ಲಿ, ಆರೆಗತ್ತಲಿನ ಮರೆಯಲ್ಲಿ, ಅವಳ ಸುಕೋಮಲ ಕರಗಳನ್ನು ತನ್ನ ಕರಗಳಲ್ಲಿ ಬಂಧಿಸಿ, ಆಗಸದಲ್ಲಿ ಥಳಗುಟ್ಟುತ್ತಿರುವ ಸಹಸ್ರ ಸಹಸ್ರ ನಕ್ಷತ್ರಗಳ ಸಾಕ್ಷಿಯಾಗಿ, ತನ್ನ ಪ್ರೇಮವನ್ನು ಸಾಬೀತುಗೊಳಿಸುವ ಮಾತಾಡುತ್ತಿದ್ದವನ ಸ್ವರದಲ್ಲಿದ್ದ ಆರ್ದ್ರತೆಗೆ, ಪ್ರಾಮಾಣಿಕತೆಗೆ ಸೋತು ಶರಣಾಗಿಬಿಟ್ಟಿದ್ದಳು ವೈಷ್ಣವಿ.**

* * *

ರಾಯರ ಕಣ್ಣಮರೆಯಲ್ಲಿ ನಡೆಯುತ್ತಿದ್ದ ಸಂವಾದಗಳಲ್ಲಿ ನಂಬಿಕೆ ಉಳಿಸಿಕೊಳ್ಳುವ ಮಾತು ಬಂದೇ ಬರುತ್ತಿತ್ತು. ಆ ಕುರಿತು ಭಾಷೆ ಕೊಟ್ಟಿದ್ದ ಫಲ್ಗುಣ. ಮಾತು ಉಳಿಸಿಕೊಳ್ಳಲು ದಾಟಿ ಬರಬೇಕಾದ ತಡೆಗೋಡೆ ಸುಲಭದ್ದೇನಾಗಿರಲಿಲ್ಲ. ಆದರೂ ಆ ತಡೆಯನ್ನು ತಾನು ನಿರ್ವಿಘ್ನವಾಗಿ ದಾಟಿ ಬಂದು ಅವಳ ಕೈ ಹಿಡಿದೇ ತೀರುತ್ತೇನೆನ್ನುವ ನಂಬಿಕೆ ಫಲ್ಗುಣನಿಗಿತ್ತು. ಹೇಳಿ ಕೇಳಿ ಹುಟ್ಟುವುದಿಲ್ಲ ಪ್ರೀತಿ. ಅದೊಂದು ಅರಿವಿಗೇ ಬರದೆ ತನ್ನಷ್ಟಕ್ಕೆ ನಡೆಯುವ ಅನುಭೂತಿ. ಅದಕ್ಕಿಲ್ಲ ಗಡಿಗೋಡೆ, ಧರ್ಮ, ಜಾತಿ, ವಯಸ್ಸಿನ ಕಟ್ಟುಪಾಡು, ಸಮಾಜದ ನಿಬಂಧನೆಗಳ ಪರಿಮಿತಿ, ಇವೆಲ್ಲಾ ಸಂಕೋಲೆಗಳು ಒಲಿದ ಜೀವಗಳನ್ನು ಒಂದಾಗಿಸಲು ಬಿಡದೆ ಕಟ್ಟಿಹಾಕುವಂತಿದ್ದಿದ್ದರೆ ಜಗತ್ತಿನಲ್ಲಿ ಪ್ರೇಮಪ್ರಕರಣಗಳೆಂಬುವುಗಳಿಗೆ ಉಳಿಗಾಲವಿತ್ತೇ? 'ಪ್ರೀತಿ ಕುರುಡು' ಅನ್ನುವ ಮಾತು ಅಸ್ತಿತ್ವಕ್ಕೆ ಬರುತ್ತಿತ್ತೇ? ಫಲ್ಗುಣ ವಿವಾಹಿತ ಪುರುಷ, ಎರಡು ಹೆಣ್ಣುಮಕ್ಕಳ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಂಡು ಇನ್ನೇನು ಮೊಮ್ಮಕ್ಕಳ ಮುಖ ನೋಡಲಿರುವ ಗೃಹಸ್ಥ. ಅಷ್ಟು ಮಾತ್ರವಲ್ಲ, ಅನುಕೂಲೆಯಾಗಿ